ಜೊತೆಗಾರನಾಗಿದ್ದ ಸಾರ್ತ್ರ್‌ನ ಜೀವನದ ಕ್ರಮವು ಇಲ್ಲಿ ನಮಗೆ ದೊರೆಯುತ್ತದೆ. ಮತ್ತೊಂದು ಮಾತು ಈ ಲೇಖನದಲ್ಲಿ ಬಂದಿದೆ: 'ಸಾರ್ತ್ರ್‌ರಿಂದ ಕಲಿಯುವುದು ಎಷ್ಟೆಲ್ಲಾ ಇದೆ ಅಂದುಕೊಂಡೆ. ಸುಳ್ಳುಗಳನ್ನು ಮುಂದಿಟ್ಟುಕೊಂಡು ಬದುಕುವುದು ನಮ್ಮಿಬ್ಬರಿಗೂ ಸಾಧ್ಯವಿರಲಿಲ್ಲ. ಅದು ಬಹುದೂರ ನಮ್ಮನ್ನು ಕೊಂಡೊಯ್ಯುವುದಿಲ್ಲವೆಂಬುದು ಗೊತ್ತಾಗಿತ್ತು' (ಪು. 27). ಈ ಸಂಕಲನದ ಮತ್ತೊಂದು ಲೇಖನ 'ಯುದ್ಧದ ತರುವಾಯ'. ಈ ಲೇಖನದಲ್ಲಿ ಜೀವನ ನಿರ್ವಹಣೆಗಾಗಿ ಕಷ್ಟ ಅನುಭವಿಸುತ್ತಿದ್ದ ಬೋವಾ ತನ್ನ ಕುರಿತು ಹೀಗೆ ಹೇಳಿಕೊಂಡಿದ್ದಾಳೆ; 'ನನ್ನ ಜೀವನ – ವಿಧಾನಗಳೆಲ್ಲ ಬದಲಾಗಿದ್ದವು. ಮನೆಯಲ್ಲಿ ಇರತೊಡಗಿದೆ. ಇದೆಲ್ಲ ಜೀವನಕ್ಕೆ ಹೊಸ ಅರ್ಥ ಕಲ್ಪಿಸಿತು' (ಪು. 46). ಇದು ಆಕೆ ತನ್ನನ್ನು ತಾನು ವಿಮರ್ಶಿಸಿಕೊಳ್ಳುವ ಯಾವ ಅವಕಾಶವನ್ನೂ ಕಳೆದುಕೊಳ್ಳದೇ ಇರುವುದರ ಸಂಕೇತ. ಆಕೆಯ ಜೊತೆಗೆ ಕೆಲಸ ಮಾಡಿದ ಲೂಸಿಯೆನ್ ಬೌದಿನ್ ಬಗ್ಗೆ ಬೋವಾ ಹೇಳಿದ್ದು ನಮ್ಮ ಹೃದಯವನ್ನು ಗಾಢವಾಗಿ ತಟ್ಟುತ್ತದೆ.

ಸಾರ್ತ್ರ್‌ನ ಕುರಿತು ಬರೆದಿರುವ ಇದರಲ್ಲಿನ ಮತ್ತೊಂದು ಲೇಖನ 'ವಿದಾಯಕ್ಕೆ ಮೊದಲು ಕೆಲ ಮಾತು' ಬೋವಾಳ ವ್ಯಕ್ತಿತ್ವದ ಒಂದು ಸಾಕ್ಷ್ಯ ರೂಪದಂತೆ ಇದೆ. 'ನಾನು ನನ್ನ ಜೀವನದ ಬಗ್ಗೆ ಕಡಿಮೆ ಬರೆದುಕೊಂಡಿರುವೆ. ಆದರೆ, ಸಾರ್ತ್ರ್‌ರ ಕುರಿತು ಹೆಚ್ಚು ಬರೆದಿರುವೆ. ಯಾಕೆಂದರೆ, ಅವರ ಜೀವನಕ್ಕೆ ನಾನು ಸಾಕ್ಷಿ' (ಪು. 71). ಸಾರ್ತ್ರ್ ಜೊತೆಗೆ ಆಕೆ ನಡೆಸಿದ ಮಾತುಕತೆಗೆ ವಿಶೇಷ ಆಯಾಮವಿದೆ. ಅದು ಸಂವಾದದ ಮಾದರಿಯದು. ಇಬ್ಬರ ನಡುವೆ ನಡೆಯುವ ಮಾತುಕತೆಗಳು ಹೇಗೆ ಇರುತ್ತವೆಯೋ ಅದೇ ರೀತಿಯಲ್ಲಿ ಅವರ ವಿದ್ವತ್ ಸಂಭಾಷಣೆಗಳು ಇವೆ. ಇದು ನಮಗೆ ಸಾರ್ತ್ರ್‌ನನ್ನು ಮತ್ತು ಆಕೆಯನ್ನು ಅರ್ಥ ಮಾಡಿಕೊಳ್ಳಲು ದೊಡ್ಡಪ್ರಮಾಣದಲ್ಲಿ ನೆರವಾಗುತ್ತದೆ. ಬೋವಾ ಎಷ್ಟು ಸೂಕ್ಷ್ಮ ಸ್ವಭಾವದವಳು ಎಂದು ತಿಳಿಯುವುದಕ್ಕೆ ಇದು ಸಹಾಯಮಾಡುತ್ತದೆ. ಜೊತೆಗೆ, ಅವಳ ಜೀವನದಲ್ಲಿ ಸಾರ್ತ್ರ್‌ನ ಸ್ಥಾನವೇನಿತ್ತೆಂಬುದು ಕೂಡ ಅರಿವಾಗುತ್ತದೆ. ಕೊನೆಗೆ ಸಾರ್ತ್ರ್‌ನ ಜೀವನದ ಕ್ರಮಗಳು, ಅವನ ಚಿಂತನೆಯ ಹಿಂದೆ ಇದ್ದ ಕಾಳಜಿಗಳನ್ನು ಇದರಲ್ಲಿ ನೋಡಬಹುದು. ನಾವು ಕಲ್ಪಿಸಿಕೊಂಡ ಸಾರ್ತ್ರ್‌ಗೂ ಬೋವಾ ಕಟ್ಟಿಕೊಡುವ ಸಾರ್ತ್ರ್‌ಗೂ ಬಹಳ ವ್ಯತ್ಯಾಸವಿದೆ ಎಂಬುದನ್ನು ಈ ಕೃತಿ ಕಾಣಿಸಿದೆ.

ಯಾವುದೇ ಆತ್ಮಚರಿತ್ರೆಯನ್ನು ಓದಿದರೂ ನಮಗೆ ಇದು ತಿಳಿಯುತ್ತದೆ. ಜೀವನ ಮತ್ತು ಅದರ ಮೌಲ್ಯವನ್ನು ನಾವು ಹೇಗೆ ಹುಡುಕುತ್ತೇವೆ, ಅದರಲ್ಲಿ ಯಾವುದನ್ನು ಆಯ್ಕೆ ಮಾಡುತ್ತೇವೆ ಎನ್ನುವುದು ಅತ್ಯಂತ ಮುಖ್ಯ. ನಮ್ಮ ಜೀವನದಲ್ಲಿ ಏನು ಆಗಿದೆ ಮತ್ತು ನಾವು ಯಾವುದನ್ನು ಅನುಸರಿಸಿದ್ದೇವೆ ಎನ್ನುವುದು ಕೂಡ ಮುಖ್ಯ. ಬೋವಾ ಇಷ್ಟವಾಗುವುದು ತನಗೆ ಏನು ಅನಿಸಿದೆ ಎಂಬುದನ್ನು ಹೇಳುವುದರಲ್ಲಿ ಮತ್ತು ಮಾಡುವುದರಲ್ಲಿ. ಒಂದೆಡೆ ಬೋವಾ ಹೇಳುತ್ತಾಳೆ; 'ಧರ್ಮ ಎನ್ನುವುದು ಒಂದು ಪಲಾಯನ'. 'ನಾನೇಕೆ ನಾಸ್ತಿಕಳು?' ಎಂಬ ಲೇಖನ ಇದನ್ನು ವಿಸ್ತಾರವಾಗಿ ಚರ್ಚಿಸಿದೆ. ಅಲಿಸ್ ಜೊತೆಗೆ ಮಾತಾಡುವಾಗ ಬೋವಾ ಇದನ್ನು ಹೇಳುತ್ತಾಳೆ. ಇವು ನಮಗೆ ಅವಳ ಜೀವನದ ಪ್ರಮುಖ ಅಂಶಗಳನ್ನು ಕಾಣಿಸಿವೆ. ಕೃತಿಯ ಮೊದಲ ಭಾಗದಲ್ಲಿ ನಮಗೆ ಹೆಚ್ಚು ಕಡಿಮೆ ಅವಳ ಮತ್ತು ಅವಳ ಸ್ನೇಹಿತರ ಪರಿಚಯ ಸಿಗುತ್ತದೆ.

ಸಾರ್ತ್ರ್‌ನ ಕೊನೆಯ ದಿನಗಳು ಮತ್ತು ಅವನ ಸಾವು ನಮ್ಮಲ್ಲಿ ಹುಟ್ಟಿಸುವುದು ಒಂದು ಸುದೀರ್ಘವಾದ ನಿಟ್ಟುಸಿರನ್ನು ಮಾತ್ರವೇ. ಆಗ ಅವಳ ಆತಂಕ ಮತ್ತು ಅವಳು ಪಟ್ಟ ಸಂಕಟವನ್ನು ನೋಡಿದಾಗ ಅವರಿಬ್ಬರೂ ಕೊನೆಯ ದಿನಗಳಲ್ಲಿ ಅನುಭವಿಸಿದ ಯಾತನೆ ತಿಳಿಯುತ್ತದೆ. ಮನಸ್ಸಿಗೆ ಬೇಸರವಾಗುತ್ತದೆ. ನಾವು ಅವಳ ದುಃಖದಲ್ಲಿ ಪಾಲ್ಗೊಂಡಿದ್ದೇವೆ ಎಂದು ಅನಿಸುತ್ತದೆ. 'ಅವರಿಲ್ಲದ ಮನೆಯಲ್ಲಿ ಒಬ್ಬಂಟಿಯಾಗಿ ಇರುವುದು ಅತ್ಯಂತ ಕಷ್ಟವಾಗಿತ್ತು' (ಪು. 94) ಎಂದಿದ್ದಾಳೆ ಬೋವಾ.